

# ಊರಿಗೂರೇ 'ಗವಿ' ನಾಮ!





ಗವಿಯಪ್ಪ, ಗವೀಶ, ಗವಿಯಮ್ಮ ಎಂಬ ಹೆಸರಿನ ಮಕ್ಕಳು.




ಇವರೆಲ್ಲರೂ 'ಗವಿಯಪ್ಪ'ರೇ!

## ಈ ಊರಲ್ಲಿ ಬಹುತೇಕ ಪ್ರತಿಯೊಂದು ಮನೆಯಲ್ಲೂ ಗವಿಯಪ್ಪ ಇದ್ದಾರೆ!

■ ಚಿತ್ರ ಲೇಖನ: **ಶಶಿಧರ ಗರ್ಗೇಶ್ವರಿ**

**ಈ** ಊರಲ್ಲಿ 'ಗವಿಯಪ್ಪ', 'ಗವಿಸ್ವಾಮಿ', 'ಗವಿಯ', 'ಗವಿಯಮ್ಮ', 'ಚನ್ನವೀರಪ್ಪ', 'ಚನ್ನವೀರಮ್ಮ' ಎಂದೇನಾದರೂ ಕೂಗಿದರೆ ಹತ್ತೆಂಟು ಧ್ವನಿಗಳು ಓಗೊಡುತ್ತವೆ! ಊರಿಗೆ ಬಂದ ಹೊಸಬರು ಗವಿಯಪ್ಪ ಎಂಬ ಹೆಸರು ಕೇಳಿ ಅಡ್ರೆಸ್ ಹುಡುಕಿದರೆ ಬೇಸ್ತು ಬೀಳುವುದು ಗ್ಯಾರಂಟಿ.

ಆದರೆ ಇದು ಊರಿನವರಿಗೆ ಸಮಸ್ಯೆಯೇ ಅಲ್ಲ. ಅವರು ಗವಿಯಪ್ಪನ ಜತೆಗೆ ಇನ್ನಿಯಲ್, ತಂದೆ ಹೆಸರೊಟ್ಟಿಗೆ ಇಲ್ಲವೆ, ಕೆಳಗಲ ಮನೆ, ಮೂಲೆ ಮನೆ. ಮಹಡಿ ಮನೆ- ಇಂತಹ ಅಡ್ಡ ಹೆಸರುಗಳಿಂದ ಗುರುತಿಸಿಕೊಂಡು ಬಿಡುತ್ತಾರೆ.

ಇದು ಬೆಳಕವಾಡಿ ಗ್ರಾಮ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಒಂದು ಸಾಧಾರಣ ಗ್ರಾಮ. ಊರಿನ ಪುರಾಣದ ಹಿನ್ನೆಲೆಯಿಂದಾಗಿಯೇ 'ಗವಿಯಪ್ಪ', 'ಗವಿಯಮ್ಮ', 'ಚನ್ನವೀರಪ್ಪ', 'ಚನ್ನವೀರಮ್ಮ' ಎಂಬ ಹೆಸರು ಮನೆಗೊಬ್ಬರಿಗಿದೆ.

ಆದರೆ ಹುಂಡಿಪುರದ ಅಂಚೆ ಕಚೇರಿಯ ಪೋಸ್ಟ್‌ಮ್ಯಾನ್‌ಗೆ ಇದು ಸಮಸ್ಯೆಯೇ ಅಲ್ಲ. ಅವರು ಕರಾರುವಾಕ್ಕಾಗಿ ಕಾಗದ ಪತ್ರಗಳನ್ನು ತಲುಪಿಸುತ್ತಾರೆ. ಇನ್ನೊಂದು ವಿಶೇಷ ಎಂದರೆ ಅಡ್ಡ ಹೆಸರಿನಿಂದ ಗುರುತಿಸಿಕೊಳ್ಳುವುದು ದಾಖಲಾತಿಯಲ್ಲೂ ನಡೆದಿದೆ. ಬ್ಯಾಂಕ್ ಇನ್ನಿತರ ಕಡೆ ಸಹ ಅಡ್ಡ ಹೆಸರು ಇಲ್ಲವೆ ತಂದೆಯ ಪೂರ್ಣ ಹೆಸರು ಮೊದಲುಗೊಂಡು ಬರೆಯಿಸಲಾಗಿದೆ.

ಈ ಊರಿನ ಪ್ರತಿಯೊಂದು ಕುಟುಂಬದ ಮೊದಲ ಮಗುವಿಗೆ 'ಗವಿ'ಯಿಂದ ಶುರುವಾಗುವಂತಹ ಹೆಸರಿಡುತ್ತಾರೆ. ಹಾಗೆಯೇ ಊರಿನಿಂದ ಮದುವೆ ಆದ ಹೆಣ್ಮಗಳ ಮೊದಲ ಹೆರಿಗೆಯ ಕೂಸಿಗೂ ಸಹ ಇಂತಹದ್ದೇ ಹೆಸರನ್ನು ಇಡಲಾಗುತ್ತದೆ. ನಂತರ ಗಂಡನ ಮನೆಯವರು ಬದಲಾವಣೆ ಮಾಡಿಕೊಂಡಿದ್ದೂ ಇದೆ.

**ಹಿನ್ನೆಲೆ:** 15ನೇ ಶತಮಾನಕ್ಕೂ ಹಿಂದೆ 'ಗವಿರುದ್ರೇಶ್ವರರು' ಎಂಬ ಸಂತರು ಇಲ್ಲಿಗೆ ಉತ್ತರ ಭಾಗದಿಂದ ಬಂದರು. ಇವರು ಇಲ್ಲಿನ ಜನರ ಕಷ್ಟ- ಸುಖಗಳಿಗೆ ಆಗುತ್ತಿದ್ದರು. ಇವರು ಸಶರೀರಾಗಿ ಸಮಾಧಿ ಆದರು. ಇವರೊಟ್ಟಿಗೆ ಶಿಷ್ಯ ಚನ್ನವೀರಪ್ಪ ಕೂಡ ಸಮಾಧಿ ಹೊಂದಿದರು. ನಂತರ ಭಕ್ತರು ಅವರಿಗೊಂದು ಗದ್ದುಗೆ ಕಟ್ಟಿ ಅಲ್ಲಿ ಎರಡು ಶಿವಲಿಂಗವನ್ನು ಪ್ರತಿಷ್ಠಾಪಿಸಿದರು. ನಾಡಹೆಂಚಿನ ಮನೆಯಾಗಿದ್ದ ಈ ಗದ್ದುಗೆಯನ್ನು ಇತ್ತೀಚೆಗೆ ದೊಡ್ಡ ದೇಗುಲವಾಗಿ ಕಟ್ಟಿದ್ದಾರೆ.

ಊರ ಜನರು ಈ ಗದ್ದುಗೆಗೆ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಹಾಗಾಗಿ ತಮ್ಮ ಮನೆಯ ಮೊದಲ ಕೂಸು ಗಂಡಾದರೆ 'ಗವಿಯಪ್ಪ' ಅಂತಲೂ, ಹೆಣ್ಣಾದರೆ 'ಗವಿಯಮ್ಮ' ಇಲ್ಲವೆ ಚನ್ನವೀರಪ್ಪ/ಚನ್ನವೀರಮ್ಮ ಅಂತ ಕರೆಯುತ್ತಾರೆ.

ಸಂತಾನ ಭಾಗ್ಯ ಇಲ್ಲದವರು ಇಲ್ಲಿನ ರಾಟೆ ಬಾವಿಯಲ್ಲಿ ಸ್ನಾನ ಮಾಡಿ ಒದ್ದೆ ಮಡಿಯಲ್ಲಿ ಈ ಗದ್ದುಗೆ ಉರುಳು ಸೇವೆ ಮಾಡಿದರೆ ಸಂತಾನವಾಗುತ್ತದೆ ಎಂಬ ಬಲವಾದ ನಂಬಿಕೆ ಗ್ರಾಮಸ್ಥರಲ್ಲಿ ಇದೆ. ಇದನ್ನು ಸೋಮವಾರ ಇಲ್ಲವೆ ಶುಕ್ರವಾರ ಮಾತ್ರ ಮಾಡುತ್ತಾರೆ.

**ಅಡ್ಡ ಹೆಸರು:** ಒಂದೇ ಹೆಸರಿನ ಹಲವರು ಇದ್ದರೆ ಗುರುತು ಮಾಡುವುದು ಕಷ್ಟ ಎಂದು ತಂದೆಯ ಹೆಸರು ಹೇಳಿ ಕರೆಯುತ್ತಾರೆ. ಉದಾ- 'ಬವಯ್ಯನ ಗವಿಯಪ್ಪ', 'ರುದ್ರಪ್ಪನ ಗವಿಯಪ್ಪ', 'ಮಾದಪ್ಪನ ಗವಿಯಪ್ಪ' ಅಂತ. ತಂದೆ ಹೆಸರು ಸಹ ಒಂದೇ ರೀತಿಯದ್ದಾಗಿ (ಚನ್ನವೀರಪ್ಪನ ಗವಿಯಪ್ಪ) ಇಂತಹ ಮೂರ್‍ನಾಲ್ಕು ಮಂದಿ ಇದ್ದರೆ ಅವರ ಮನೆಯ ಕಸುಬಿನಿಂದ ಪಟೇಲ್/ಗೌಡಿಕೆ, ಇಲ್ಲವೆ ಚಿಕ್ಕಂದಿನಿಂದ ಬಂದ ಅಡ್ಡ ಹೆಸರು ಚಡ್ಡಿ, ದೊಡ್ಡಮನೆ, ಬಾವಿಕಟ್ಟೆಮನೆ, ಮೂಲೆ ಮನೆ... ಹೀಗೆ ಗುರುತು ಹಚ್ಚಲು ಸುಲಭವಾಗುವಂತೆ ಕರೆಯುತ್ತಾರೆ. ಈ ಹೆಸರು ಸಹ ಕಾಲಕ್ಕೆ ತಕ್ಕಂತೆ ಸುಧಾರಣೆ ಆಗುತ್ತದೆ. 50- 60 ದಾಟಿದವರು ಗವಿಯಪ್ಪ ಎಂದಿದ್ದರೆ, 30-40ರ ಆಸುಪಾಸಿನವರು ಗವಿಸ್ವಾಮಿ, ಯುವಕರು ಗವೀಶ/ ಗವಿರುದ್ರೇಶ, ಮಕ್ಕಳಿಗೆ ಗವಿಪ್ರಸಾದ್ ಎಂಬ ನವೀನ ರೂಪ ಪಡೆದಿದ್ದಾರೆ. 'ಗವಿಯಪ್ಪ' ಎಂಬ ಹೆಸರು ಊರಿನ ಎಲ್ಲಾ ಸಮುದಾಯದವರಲ್ಲೂ ಇರುವುದು ಮತ್ತೊಂದು ವಿಶೇಷ.

300 ಮನೆಗಳ ಈ ಗ್ರಾಮದಲ್ಲಿ ಶೇ. 80ರಷ್ಟು ಸಾಕ್ಷರತೆ ಇದೆ. ಹೆಣ್ಣುಮಕ್ಕಳು ಸಹ ಪ್ರೌಢಶಾಲೆಯನ್ನು ಕಲಿತಿದ್ದಾರೆ. ಗ್ರಾಮಕ್ಕೆ ಬಸ್ ಸೌಕರ್ಯ ಚೆನ್ನಾಗಿದೆ. ನೀವೇನಾದರೂ ಇಲ್ಲಿಗೆ ಬಂದರೆ ಅಡ್ಡ ಹೆಸರು ಇಲ್ಲವೆ ಇನ್ನಿಯಲ್ ಸೇರಿಸಿ ಅಡ್ರೆಸ್ ಕೇಳುವುದನ್ನು ಮಾತ್ರ ಮರೆಯಬೇಡಿ!